ಯಾವುದನ್ನೂ ಅರ್ಥೈಸಿಕೊಳ್ಳದ ಪದ್ಧಿಯಂತೆ ಜೀವನ ನಡೆಸುತ್ತಿದ್ದರೆ ಗಂಡು ಸಂತುಷ್ಟನಾಗಿರುತ್ತಾನೆ. ಅವನ ಲೆಕ್ಕದಲ್ಲಿ ಅರ್ಥಾತ್ ಸುಖಿಪುರುಷ. ಸ್ವರ್ಗಕ್ಕೆ ಕಿಚ್ಚು ಹಚ್ಚುವಂತಿರುತ್ತದೆ ಅವನ ಸಂಸಾರ. ಎಲ್ಲಿ ಹೆಂಡತಿಗೆ ವಿಚಾರಮಾಡುವ ಬುದ್ಧಿ, ಮನಸ್ಸು ಕ್ರಿಯಾಶೀಲವಾಗಿರುತ್ತದೋ ಗಂಡನೆನ್ನುವವನಿಗೆ ಕೆಲವೊಮ್ಮೆ ಅಸಹನೆ, ಅಹಂಕಾರ ಹೆಡೆಬಿಚ್ಚಿಕೊಳ್ಳುತ್ತದೆ. ಇಬ್ಬರ ಬದುಕೂ ಬದುಕಾಗುಳಿಯದೇ ಇನ್ನೇನೋ ಆಗತೊಡಗುತ್ತದೆ. ಅದರ ಅರಿವೇ ಆಗುವುದಿಲ್ಲ. ಸೀತೆಯೂ ಇದನ್ನೇ ಸಾವಿರ ಬಾರಿ ಯೋಚಿಸಿ ದಣಿದಿದ್ದಾಳೆ. ತನ್ನ ಕೈವಶದಲ್ಲಿಲ್ಲದೇ ಹೇಗೆ ಬೇಕೋ ಹಾಗೇ ಸವೆದುಹೋಗುತ್ತಿರುವ ಕಾಲವನ್ನು ಹಿಡಿದಿಡಲಾರದೇ, ಬೀಸುವ ಗಾಳಿಯನ್ನು ತನ್ನೆಡೆಗೆ ತಿರುಗಿಸಲಾಗದೇ ಒದ್ದಾಡಿದ್ದಾಳೆ. ತನ್ನೆಲ್ಲ ಸಂವೇದನೆಗಳು ಯಾಕೆ ಈ ಮನುಷ್ಯನಿಗೆ ಅರ್ಥವಾಗುವುದಿಲ್ಲವೆಂದು ರೋಸಿಹೋಗಿದ್ದಾಳೆ. ಆದರೆ ರಾಮನಿಗೆ ಇದ್ಯಾವುದೂ ತಿಳಿಯದೋ, ತಿಳಿದೂ ತಿಳಿದೂ ಹೀಗೆ ಆಡುತ್ತಾನೋ ಗೊತ್ತಿಲ್ಲ. ಆದರೆ ಸೀತೆಯ ಬಗ್ಗೆ ಅವನಿಗೆ ಅಸಹನೆ. ಯಾಕೆಂದರೆ ಅವನಲ್ಲಿಲ್ಲದ ಬಹಳಷ್ಟು ಅವಳಲ್ಲಿದೆ.

ಬಹುಶಃ ರಾಮನ ಕಲ್ಪನೆಯಲ್ಲಿ ಸೀತೆ ಹಳೇಕಾಲದ ಸೀತೆಯಂತೆ ಅವನು ಆಫೀಸಿನಿಂದ ಬರುವ ಹೊತ್ತಿಗೆ ಕೈಯಲ್ಲಿ ನೀರಿನ ತಂಬಿಗೆ ಹಿಡಿದು ಮುಂಬಾಗಿಲಲ್ಲೇ ಅವನನ್ನು ನಗುಮೊಗದಿಂದ ಆದರಿಸಿ, ಕೈಕಾಲಿಗೆ ನೀರುಕೊಟ್ಟು ಕಾಫಿ ತಿಂಡಿ ಕೇಳುವವಳಾಗಿರಬೇಕಿತ್ತು. ಆದರೆ ಅವನು ಬಯಸಿದ್ದು ಉದ್ಯೋಗದಲ್ಲಿರುವ ಹೆಂಡತಿಯೂ ಮತ್ತು ತನ್ನ ಸೇವೆಯನ್ನು ಮಾಡುವ ಸೇವಕಿಯೂ ಏಕಕಾಲಕ್ಕೆ.

'ನೂರು ರೂಪಾಯಿ ತಾ ಕಾಯಿಪಲ್ಲೆ ತರ್ತೀನಿ' ಎಂದು ಗಂಡನನ್ನು ಕೇಳಿದ್ದೇ ಅವ ಉಗ್ರ ನರಸಿಂಹಾವತಾರ ತಾಳಿ 'ನಿನ್ನ ಹತ್ತಿರ ಅಷ್ಟು ದುಡ್ಡಿಲ್ಲವೇ? ಯಾಕೆ ದುಡೀತಿ ಸಾಯಲಿಕ್ಕೆ? ಗಂಟು ಮಾಡಿ ಕುಂಡೆ ಕೆಳಗೆ ಇಟ್ಟುಕೊಂಡಿದ್ದೀಯಲ್ಲ?' ಎಂದು ಇನ್ನೂ ಏನೇನೋ ಸೇರಿಸಿ ಬಯ್ಯಲಿಕ್ಕೆ ಶುರುಮಾಡಿದ ರಾಮಪ್ಪನನ್ನು ಒಂದು ಕ್ಷಣ ನೋಡಿದಳು. ಇಪ್ಪತ್ತು ವರ್ಷದ ಹಿಂದೆ ಏನನ್ನೂ ಹೇಳದೇ ತನ್ನನ್ನು ಮಕ್ಕಳನ್ನೂ ಬಿಟ್ಟು ಒಂದು ರಾತ್ರಿ ಕಾಣೆಯಾದ ರಾಮ ಇವನೇಯೇ ಅನಿಸಿತು.

ಇಪ್ಪತ್ತು ವರ್ಷದಲ್ಲಿ ತುಂಬಾ ಜಾಗ ಸುತ್ತಿದ್ದೇನೆ. ಪ್ರಯಾಗದಲ್ಲಿದ್ದೆ, ಹಿಮಾಲಯದಲ್ಲಿದ್ದೆ. ತುಂಬಾ ಸಾಧನೆ ಮಾಡಿದ್ದೇನೆ, ಪರಮಾತ್ಮನ ಸಾಕ್ಷಾತ್ಕಾರವಾಗಿದೆ, ಅದೂ ಇದೂ ಎಲ್ಲ ತುಂಬ ಜ್ಞಾನಿಯಂತೆ ಮಾತಾಡುವ ರಾಮಪ್ಪನನ್ನು ಅಚ್ಚರಿಯಲ್ಲಿ ನೋಡುತ್ತಿರುತ್ತಾಳೆ. ಪ್ರಾತಃಪೂಜೆ ಪುನಸ್ಕಾರ ಮುಗಿಸಿ ಗಂಟೆಗಟ್ಟಲೆ ಜಪಮಣಿ ಹಿಡಿದು ಜಪಿಸುತ್ತ ಕೂರುವ ಗಂಡನ ಮೇಲೆ ಭಕ್ತಿಭಾವ ಮೂಡುತ್ತದೆ. ಅವನನ್ನು ನೋಡಿದರೆ ಕರುಣೆಯುಕ್ಕುತ್ತದೆ. ಎಷ್ಟು ಬದಲಾಗಿದ್ದಾನೆ ಇವ ಎಂದುಕೊಳ್ಳುತ್ತಿದ್ದಳು. ಯಾವುದೋ ಒಂದು ಪುಟ್ಟ ಜಗಳವನ್ನೇ ಬ್ರಹ್ಮಾಂಡವಾಗಿಸಿ ದೋಷವನ್ನೆಲ್ಲ ಸೀತೆಯ ಮೇಲೆ ಹೊರಿಸಿ ನಡುನೀರಿನಲ್ಲಿ ಕೈಬಿಟ್ಟು ಹೋದ ರಾಮನನ್ನು ಕೆಲವರು ಪ್ರಯಾಗದಲ್ಲಿ ಕಂಡಿದ್ದೆವು ಅಂದರು. ಕೆಲವರು ಹರಿದ್ವಾರದಲ್ಲಿ, ಗಂಗಾಘಾಟ್‌ನಲ್ಲಿ ಕಂಡೆವು ಎಂದರು. ಆಗಿನ್ನೂ ಮಕ್ಕಳು ಚಿಕ್ಕವರು. ನೆರೆಹೊರೆಯವರಿಗೆ ತಾನೇ ಹಣಕೊಟ್ಟು ಹರಿದ್ವಾರವನ್ನೆಲ್ಲ ಹುಡುಕಿಸಿದರೂ, ಪ್ರಯಾಗವನ್ನೆಲ್ಲ ಅಲೆದು ಬಂದರೂ ರಾಮಪ್ಪನ ಪತ್ತೆಯಾಗಿರಲಿಲ್ಲ. ಒಬ್ಬೊಬ್ಬರದು ಒಂದೊಂದು ವರಸೆ. ಸಿಗಲಿಲ್ಲವೆಂದರೆ ಅವನು ಜೀವಕ್ಕೇನಾದರೂ ಹಾನಿಮಾಡಿಕೊಂಡನೋ ಏನೋ? ಇತ್ತೀಚೆಗೆ ಅವನ ಮನಃಸ್ಥಿತಿಯೇ